PAPERS LAID ON THE TABLE

SRI G. RAME GOWDA (Minister for Food and Forests)- -I lay :

Notification No. FFD 46 FTS 78 dated 25th July 1978

The Karnataka Forest (Amendment) Rules 1978

Under Section 103 of the Karnataka Forest Act 1963

MR. SPEAKER—The notification is laid

Calling Attention to a Matter of Urgent Public Importance :

re : damages caused to roads due to heavy rains in S.K. District.

SRI B.A. MOHIDEEN (Bantwal)—I call the attention of the Minister for Public Works to the damage caused to roads due to heavy rains in South Kanara District.

SRI S. BANGARAPPA (Minister for Public Works) I wish to make the following Statement.

RAINFALL :

The rainfall in Dakshina Kannada District during the year 1978 upto July 1978 has been quite heavy when compared to the previous year viz. 1977. Rain fall details are as follows :

Month		Year 1977		Year 1978
May	...	127 mm	...	428 mm
June	...	860 mm	...	1,610 mm
July (Upto 14th)	...	378 mm	...	764 mm
	Total	1,365 mm		2,802 mm

The heavy rainfall resulted in floods in most of the rivers and the flood level was about one foot below the danger level in Netravathi river near Bantwal. The position was similar in respect of Gurupur river also.

I. STATE FUND ROADS :

2. **Damages** : Due to the heavy rainfall, damage was caused to the culverts, road surface, protective works etc. Traffic was inrerrupted in the case of the following roads on 8-7-1978 and 9-7-1978 and traffic had been allowed through diversion roads.

(i) Mani-Ullal road.

(ii) Gurpur-Mallur road.

(iii) Multy Manampady Ellinje road.

Now traffic has been allowed on these roads except on Mani-Ullal road.

Traffic was also interrupted for a short while on 13-7-78 on Mangalore-Mysore and Pane-Mangalore-Puttur roads and now traffic is restored on these roads,

Traffic was restored by making temporary arrangement in case of certain other roads by filling up the scoured portion and by providing necessary barricading. All possible arrangements have been made to avoid hardship to the people due to interruption in communication.

3. Cost of repair/reconstruction:-

The damaged portion of the road surface/structure is to be repaired/reconstructed depending upon the situation. The amount required for restoration of the road is estimated as follows :-

Taluk				Amount
				Rs.
Mangalore	...	...	...	7,13,000
Bantwal	...	...	...	7,29,000
Puttur	..	...	...	7,62,000
Sullia	...	...	...	6,42,000
Udupi	...	...	...	1,85,000
Condapur	...	...	...	70,000
Karkala	...	...	...	10,000
		Total	...	31,11,000

Details of damages caused to various roads and road structures are received from the Chief Engineer (Communications and Buildings).

4. Funds:

In the budget estimate for the year 1978-79, there is no specific provision for meeting the expenditure incurred towards repairs of flood damage works, In the maintenance and repair grant allotted for this year, certain amount is reserved for meeting the expenditure towards flood damaged works. The amount so reserved is Rs. 56

lakhs for the entire State. Damages occur during monsoon in all places where the rainfall is heavy, particularly in Maland areas. The extent of damages in Dakshina Kannada District alone is Rs. 31 lakhs.

The damaged portions are to be repaired and reconstructed on top priority to prevent further damages and also to restore the road to its original condition.

All efforts will be made to allot additional funds to meet the expenditure for completing the repair works during this year itself.

II. NATIONAL HIGHWAYS :

Due to incessant heavy rains from 11-7-78 to 13-7-78 certain damages are caused to National Highway No. 17 and 48 in South Kanara District coming under the jurisdiction of N.H. zone. The details of damages and the approximate cost towards rectification of these damages are as follows:-

(i) National Highways No. 17;-

Heavy pot holes including erosion of berms have occured on the existing N. H. in the reach from Km. 241 to 283 i.e., between Coondapur and border of South Kanara and North Kanara Districts The traffic was not disrupted on this National Highway. Action has been taken to setright the road surface temporarily. The approximate cost of permanent rectification of damages to road surface and berms on this N.H. will be Rs. 1.00 lakh.

(ii) National Highway No. 48:-

Heavy pot holes including erosion of berms have occured on this NH in the reach from Mangalore to border of S. K. and Hassan Districts. On 13th night, flood waters overtopped the road near Thumbe and there was 1'-0'' of water on the road. Consequently traffic on this NH was disrupted for about 4 hours on 13th night. The approximate cost of rectification of damages to the road surface and berms is reported to Rs. 50,000/-

FUNDS

The funds required for rectification of the above damages will be allotted by the Government of India after getting sanction to the flood damage estimates. Necessary action has been taken to get sanction to these estimates. Mean while action has been taken to rectify the damages temporarily under ordinary repairs (Normal maintenance) grants allotted by the Government of India.

2-30 P.M,

ಶ್ರೀ ಬಿ. ಎ. ಮೊಹಿದ್ದೀನ್.—ಸ್ವಾಮಿ. ತಾವು ಬಡ್ಜೆಟ್ ಎಸ್ಟಿಮೇಟ್ ಬುಕ್-೬ರಲ್ಲಿ ಫ್ಲಡ್ಸ್ ಡ್ಯಾಮೇಜ್ ಆದಂತ ಭಾಗಗಳಲ್ಲಿ ಖರ್ಚು ಮಾಡಲಿಕ್ಕೆ ಪ್ರಾವಿಷನ್ ಇಲ್ಲ. ಆದರೂ ಮೆಂಟಿಯಿನೆನ್ಸ್ ಗ್ರಾಂಟಿನಲ್ಲಿ ೫೦ ಲಕ್ಷ ರೂಪಾಯಿ ಇಟ್ಟಿದ್ದೇವೆ. ಆದರಲ್ಲಿ ೩೧ಲಕ್ಷ ರೂಪಾಯಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಹಕ್ಕೆ ತುತ್ತಾದ ಪ್ರದೇಶಗಳಿಗೆ ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ, ಪ್ರತಿ ವರ್ಷವೂ ಹೆಚ್ಚು ಖರ್ಚು ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ೫೦ ಲಕ್ಷ ರೂಪಾಯಿಗಳು ಇಡೀ ರಾಜ್ಯಕ್ಕೆ ಸಂಬಂಧ ಪಟ್ಟಂತೆ ಇಟ್ಟಿರುವುದು. ಆದರಲ್ಲಿ ೩೧ ಲಕ್ಷ ರೂಪಾಯಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖರ್ಚು ಮಾಡಲಾಗಿದೆ. ಆ ಭಾಗದಲ್ಲಿ ಹೆಚ್ಚು ನಷ್ಟವಾಗಿರತಕ್ಕಂಥಾದ್ದು ಸರ್ಕಾರದ ಗಮನದಲ್ಲಿದೆ, ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—೩೧ ಲಕ್ಷ ರೂಪಾಯಿ ದಕ್ಷಿಣ ಕನ್ನಡ ಜಿಲ್ಲೆಗೆ ಬೇಕಾಗುತ್ತದೆ ಇಡೀ ರಾಜ್ಯಕ್ಕೆ ೫೦ ಲಕ್ಷ ರೂಪಾಯಿ ಇದೆ ಎಂದು ಹೇಳಿದ್ದೀರಿ. ಇದು ಸ್ಟೇಟ್ ಹೈವೆ, ಇತರೆ ರಸ್ತೆಗಳಿಗೆ ಅಲ್ಲದೆ ನ್ಯಾಷನಲ್ ಹೈವೇ ಬೇರೆ ಇದೆ. ತಾವು ಹೇಳಿದ ಹಾಗೆ ಹಣ ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಅದು ನಮಗೂ ಅರ್ಥವಾಗುತ್ತದೆ. ತಾವು ಮಾರ್ಕೆಟ್ ಸೆಸ್ ಹಣ ವಸೂಲು ಮಾಡುತ್ತಿದ್ದೀರಿ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ಯಾಕ್ಸಿಮಮ್ ವಸೂಲಾಗಿದೆ. ಆದರೆ ಆ ಭಾಗದಲ್ಲಿ ಖರ್ಚು ಮಾತ್ರ ಕೊನೆಗೆ ಮಾಡಿದ್ದೀರಿ. ಈಗ ಆ ಭಾಗದಲ್ಲಿ ವಿಶೇಷವಾದ ಒಂದು ಸನ್ನಿವೇಶ ಇರುವುದರಿಂದ ಇಂಥ ಒಂದು ಸಂದರ್ಭದಲ್ಲಿ ಆ ಒಂದು ಫಂಡಿನಿಂದ ನಮಗೆ ೩೧ಲಕ್ಷ ರೂಪಾಯಿ ಪೂರ್ತಿಯಾಗಿ ಒದಗಿಸಿ ರಸ್ತೆಗಳ ಹಾಗೂ ಇನ್ನಿತರ ದುರಸ್ತಿ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ, ಅಲ್ಲದೆ, ಕೇಂದ್ರ ಸರ್ಕಾರದಲ್ಲಿ ಫ್ಲಡ್ ಇರಿಗೇಷನ್ ಮತ್ತು ಫ್ಲಡ್ ಕಂಟ್ರೋಲ್‌ಗೆ ಸಂಬಂಧಪಟ್ಟಂತೆ ಪ್ರತ್ಯೇಕವಾದ ಖಾತೆ ಇದೆ. ನಮ್ಮ ಭಾಗದಲ್ಲಿ ಈ ಕೆಲಸಕ್ಕಾಗಿ ಒಂದು ಪೈಸಾ ಕೂಡ ಖರ್ಚು ಮಾಡಿಲ್ಲ, ಪರಾಹ ಯೋಜನೆಯಲ್ಲಿ ಖರ್ಚು ಮಾಡುವುದಕ್ಕೆ ಬಂದರೂ ಬರಬಹುದು. ಈಗ ನಮ್ಮ ಕಡೆ ಫ್ಲಡ್ ಇರುವುದರಿಂದ ಇದು ಫ್ಲಡ್ ಕಂಟ್ರೋಲ್ ಏರಿಯಾ ಆಗಿರುವುದರಿಂದ ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಮನ ಮೊಲಿಸಿ ಅಲ್ಲಿಂದ ಹಣ ಪಡೆಯಬೇಕೆಂದು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ.

ಶ್ರೀ ಬಿ ಎ. ಮೊಹಿದ್ದೀನ್.—ಸ್ವಾಮಿ, ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದಿರಿ. ಇಲ್ಲಿ ಪ್ರತಿ ವರ್ಷವೂ ಈ ರೀತಿಯ ಪ್ರವಾಹ ಬಂದು ರಸ್ತೆಗಳಲ್ಲಿ ನೀರು ತುಂಬಿ ಪೂರ್ತಿ ಸಂಪರ್ಕವನ್ನೇ ಕಡಿದು ಹಾಕುತ್ತದೆ. ಇದರಿಂದ ಲಕ್ಷಾಂತರ ರೂಪಾಯಿಗಳ ನಷ್ಟವಾಗುವುದಲ್ಲದೆ, ಜನಸಾಮಾನ್ಯರಿಗೂ ಇದರಿಂದ ತೊಂದರೆಯಾಗುತ್ತದೆ. ಆದ್ದರಿಂದ ತಾವು ಕೇಂದ್ರ ಸರ್ಕಾರದ ಸಂಪರ್ಕ ಬೆಳೆಸಿ ಹೆಚ್ಚು ಹಣ ಪಡೆದು ರಸ್ತೆಗಳ ಪಕ್ಕದಲ್ಲಿ ಬಂಡುಗಳನ್ನು ಹಾಕಿ ಸರಿಯಾದ ಬಂದೋಬಸ್ತು ಮಾಡುತ್ತೀರಾ ? ಅಲ್ಲದೆ ಗುರುಪುರ ಮತ್ತು ಪುಲ್ಲೂರು ಏನು ರಸ್ತೆ ಇದೆ. ಇದು ಸುಮಾರು ೨೫ ಹಳ್ಳಿಗಳಿಗೆ ಒಂದೇ ರಸ್ತೆ. ಇವನ್ನು ಬಿಟ್ಟರೆ ಬೇರೆ ರಸ್ತೆಗಳೇ ಇಲ್ಲ. ಇದನ್ನು ಕೂಡಲೇ ದುರಸ್ತಿ ಮಾಡಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಯು. ಟಿ. ಫರೀದ್.—ಸ್ವಾಮಿ, ಗ್ರಾಮಾಂತರ ರಸ್ತೆಗಳ ವಿಚಾರವೇ ಇಲ್ಲಿ ಇಲ್ಲ. ಇವತ್ತು ಸಾಮಿರಾರು ಹಳ್ಳಿಗಳಿಗೆ ರಸ್ತೆಗಳ ಸಂಪರ್ಕವೇ ಇಲ್ಲ, ಗ್ರಾಮಾಂತರ ರಸ್ತೆ ಸಂಪರ್ಕದ ಕೆಲಸವನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡಿದ್ದರೂ ಅವರು ಬಂದು ನೋಡಿಲ್ಲ. ನಮ್ಮ ಕ್ಷೇತ್ರ ವಲ್ಲಿ ಬಸು ಗಳು ಹೋಗುವುದು ಇರಲಿ. ಕಾರುಗಳು ಕೂಡ ಹೋಗುವುದಕ್ಕೆ ಆಗುವುದಿಲ್ಲ. ಒಂದು ಸಾರಿ ನಾವು ಫ್ಲಡ್ ಬಂದಾಗ ನಡೆದುಕೊಂಡು ಹೋಗುವಂತ ಪರಿಸ್ಥಿತಿ ಬಂತು. ನಮ್ಮ ಬೆಳ್ತಂಗಡಿ ತಾಲ್ಲೂಕು ಬಹಳ ಹಿಂದುಳಿದ ತಾಲ್ಲೂಕು. ಇಲ್ಲಿ ಆ ವಿಷಯವನ್ನೇ ಮೆನ್‌ಷೆನ್ ಮಾಡಿಲ್ಲ. ಇದು ಮಂಗಳೂರಿಗೆ ಬಹಳ ದೂರದಲ್ಲಿರುವಂತ ತಾಲ್ಲೂಕು. ಮಂಗಳೂರು ಮತ್ತು ಬೆಂಗಳೂರು ಹೋಗುವಂತ ರಸ್ತೆಯಲ್ಲಿ ಬಹಳ ತಗ್ಗು ಪ್ರದೇಶಗಳು ಇದ್ದ ಕಾರಣ ಮಳೆಗಾಲದಲ್ಲಿ ಸಾರಿಗೆ ಸಂಪರ್ಕ ಸಂಪೂರ್ಣವಾಗಿ ಕಡಿದುಹೋಗುತ್ತದೆ. ಇದಕ್ಕೆ ಒಂದು ಎತ್ತರ ಮಾಡಬೇಕು, ಅಥವಾ ಒಂದು ಬೈ—ಪಾಸ್ ಮಾಡಿದರೆ ಅನುಕೂಲವಾಗುತ್ತದೆ. ಕೇಂದ್ರ ಸರ್ಕಾರದಿಂದ ಇದಕ್ಕೆ ಬೇಕಾದಂಥ ಹಣವನ್ನು ಪಡೆದು, ಗ್ರಾಮಾಂತರ ಪ್ರದೇಶಗಳ ರಸ್ತೆಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎ. ಜಿ ಕೊಡಗಿ.—ಮಾನ್ಯ ಮಂತ್ರಿಗಳು ವಾಹನ ಸಂಚಾರಕ್ಕೆ ಯೋಗ್ಯ ಇದೆ ಎಂದು ಹೇಳಿದರು. ನಮ್ಮ ಕುಂದಾಪುರ ತಾಲ್ಲೂಕು ಮತ್ತಿತರ ಕಡೆ ವಾಹನ ಸಂಚಾರ ನಿಂತಿದೆ. ಡ್ಯಾಮೇಜ್ ಆಗಿರುವ ಭಾಗಗಳಲ್ಲಿ ೩೧ ಲಕ್ಷ ರೂಪಾಯಿ ಕೊಟ್ಟಿದ್ದೇವೆಂದು ಹೇಳಿದಿರಿ, ಮತ್ತೊಮ್ಮೆ ಇಡೀ ಜಿಲ್ಲೆಯಿಂದ ಕೂಲಂಕಷವಾಗಿ ಪುನಃ ವರದಿಯನ್ನು ತರಿಸಿ, ಸಾರಿಗೆ ಸಂಪರ್ಕದ ಅವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಕೂಡಲೇ ಆದೇಶ ಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಕಕ್ಕಿಲಾಯರವರು ಹೇಳಿದಹಾಗೆ ನಮ್ಮ ಜಿಲ್ಲೆಯಿಂದ ಮಾರ್ಕೆಟ್ ಸೆಸ್‌ರೂಪದಲ್ಲಿ ೪೦ ಲಕ್ಷ ರೂಪಾಯಿ ಕೊಡುತ್ತಿದ್ದೇವೆ. ನಾನು ಕೂಡ ಮಾರ್ಕೆಟ್ ಕಮಿಟಿ ಅಧ್ಯಕ್ಷನಾಗಿದ್ದೇನೆ. ನಮ್ಮ ಭಾಗಕ್ಕೆ ಮೂರನೇ ಒಂದು ಭಾಗ ಮಾತ್ರ ಹಣ ವೆಚ್ಚವಾಗಿದೆ. ಇಂಥ ಸಂದರ್ಭದಲ್ಲಾದರೂ ಈ ಒಂದು ಫಂಡಿನಿಂದ ಹೆಚ್ಚಿಗೆ ಹಣ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ. ನಾನು ಈಗಾಗಲೇ ತಿಳಿಸಿರತಕ್ಕಂಥ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರುಗಳು ಕೆಲವು ಪರಿಹಾರಗಳನ್ನು ಸೂಚನೆ ಮಾಡಿದ್ದಾರೆ. ಮಾರ್ಕೆಟ್ ಸೆಸ್ ಬಗ್ಗೆ ಕಕ್ಕಿಲಾಯರವರು ಮತ್ತು ಕೊಡಗಿಯವರು ಪ್ರಸ್ತಾಪ ಮಾಡಿದ್ದಾರೆ. ೪೦ ಲಕ್ಷ ರೂಪಾಯಿ ಹಣವನ್ನು ನಾವು ಕೊಡುತ್ತಿದ್ದೇವೆ. ನಮ್ಮ ಭಾಗದಲ್ಲಿ ಹೆಚ್ಚು ಹಣ ಖರ್ಚು ಮಾಡಬೇಕೆಂದು ಹೇಳಿದರು. ಈಗಾಗಲೇ ಸರ್ಕಾರದ ಅಭಿಪ್ರಾಯವನ್ನು ಅನೇಕ ಸಂದರ್ಭಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಮಾರ್ಕೆಟ್ ಸೆಸ್‌ನ ಬಹುಭಾಗ ಅಂದರೆ ೭೫ ಭಾಗ ಹಣವನ್ನು ಆ ಭಾಗದಲ್ಲಿಯೇ ಖರ್ಚು ಮಾಡುವಂತಾದ್ದು ಸರ್ಕಾರದ ನೀತಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಅದೇ ರೀತಿ ಹಣ ಖರ್ಚು ಮಾಡಲಾಗುವುದು.

ಅದರಿಂದ ೪೦ ಲಕ್ಷ ರೂಪಾಯಿಗಳೂ ಬಂದರೂ ಕೂಡ ಅದಷ್ಟನ್ನೂ ಕೂಡ ಅದಕ್ಕೇನೆ ಖರ್ಚು ಮಾಡಬೇಕು ಎನ್ನುವ ಉದ್ದೇಶ ನಮಗಿರುತ್ತದೆ.

ಇನ್ನು ಕಕ್ಕಿಲಾಯರವರು ಇರಿಗೇಷನ್ ಮತ್ತು ಫ್ಲಡ್ಸ್‌ಗೆ ಸಂಬಂಧಪಟ್ಟಂತೆ ಹೇಳಿರುತ್ತಾರೆ. ಅದು ಗೌರ್ನಮೆಂಟ್ ಆಫ್ ಇಂಡಿಯಾ ಸ್ಕೀಮ್ ಇರುತ್ತದೆ. ಅದರ ಪ್ರಕಾರ ಹಣವನ್ನು ಕೊಡಬೇಕಾಗಿರುತ್ತದೆ. ಈ ಒಂದು ಕ್ಷೇತ್ರದಲ್ಲಿ ಹೆಚ್ಚಿನ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ಹೆಚ್ಚಿಗೆ ಹಣವನ್ನು ಕೊಡಿ ಎಂದು ತಿಳಿಸಿದ್ದೇವೆ. ಫ್ಲಡ್ ಕಂಟ್ರೋಲ್ ಮಾಡುವುದು, ನದಿಗಳು ಸಮುದ್ರ ದಂಡೆಯನ್ನು ಸೇರುವುದು ಸಮುದ್ರ ಉಕ್ಕಿಬಂದಾಗ ನದಿದಂಡೆಗಳನ್ನು ಕೊರೆಯುವುದು ಇದಕ್ಕೆಲ್ಲ ಸರ್ಕಾರ ಯೋಜನೆಯನ್ನು ಇಟ್ಟುಕೊಂಡಿರುತ್ತವೆ. ರೋಡ್‌ಗಳು, ಬ್ರಿಡ್ಜಸ್‌ಗಳಿಗಾಗಿ ಸ್ಪೆಷಲ್ ಆಗಿ ಹಣವನ್ನು ಕೊಡಬೇಕೆಂಬುದು ಕೇಂದ್ರ ಸರ್ಕಾರ ಇಟ್ಟುಕೊಂಡಿಲ್ಲ. ರೋಡ್ ಪಾಳಾದರೆ, ಬ್ರಿಡ್ಜಸ್ ಪಾಳಾದರೆ ಎಷ್ಟರಮಟ್ಟಿಗೆ ರಾಜ್ಯ ಸರ್ಕಾರದ್ದು ಜವಾಬ್ದಾರಿ ಇರುತ್ತದೋ, ವಾಸ್ತವಾಂಶ ಪರಿಸ್ಥಿತಿ ಬಂದಾಗ ಅಷ್ಟು ಹಣವನ್ನು ಒದಗಿಸತಕ್ಕದ್ದಾಗಲಿ ಅಥವಾ ಪ್ರತ್ಯೇಕವಾಗಿ ಸಹಾಯವನ್ನು ಕೊಡತಕ್ಕಂಥಾದ್ದಾಗಲಿ ಕೇಂದ್ರ ಸರ್ಕಾರದ ಮೇಲೆಯೂ ಇರುತ್ತದೆ. ಇದೆಲ್ಲಾ ಕಾರ್ಯಗಳನ್ನು ಯೋಜನಾಬದ್ಧವಾಗಿ ಮಾಡತಕ್ಕಂಥ ಕಾರ್ಯಕ್ರಮವನ್ನೂ ಕೂಡ ಪಾಕಿಕೊಂಡಿರುತ್ತದೆಂದು ತಿಳಿಸಬಯಸುತ್ತೇನೆ.

ಇನ್ನು ನ್ಯಾಷನಲ್ ಹೈವೇಗಳು ಏನು ಇರುತ್ತವೆ ಇದು ಲೋ ಲೆವಲ್‌ನಲ್ಲಿ ಇರುತ್ತವೆ. ಇವುಗಳನ್ನು ಹೈ ಲೆವಲ್ ಮಾಡಬೇಕು, ಇದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕು ಎಂದು ಹೇಳಿದರು. ಈ ರೀತಿಯಾಗಿ ಹೆಚ್ಚು ಹೆಚ್ಚು ನೀರು ತುಂಬಿಕೊಳ್ಳತಕ್ಕಂಥ ನ್ಯಾಷನಲ್ ಹೈವೆಗಳನ್ನು ಎತ್ತರ ಮಾಡಿದರೂ ಅದು ಕೂಡ ಉಪಯುಕ್ತವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಮಾನ್ಯ ಯು.ಟಿ. ಫರೀದ್‌ರವರು ಮಾತನಾಡುತ್ತಾ ಗ್ರಾಮಾಂತರ ಪ್ರದೇಶಗಳ ಬಗ್ಗೆ ಹೆಚ್ಚಿನ ಪ್ರಸ್ತಾಪ ಮಾಡಲಿಲ್ಲವೆಂದು ತಿಳಿಸಿದರು, ಗ್ರಾಮಾಂತರ ಪ್ರದೇಶಗಳಲ್ಲಿ ಕನಿಷ್ಟಪಕ್ಷ ರಸ್ತೆ ಸಂಚಾರ ಮಾರ್ಗಗಳನ್ನಾದರೂ ತಕ್ಷಣ ಮಾಡಬೇಕು ಎನ್ನುವ ದೃಷ್ಟಿಯಿಂದ ಯಾವ ಯಾವ ಪ್ರದೇಶಗಳಲ್ಲಿ ರಸ್ತೆ ಸಂಚಾರ ಮಾರ್ಗಗಳನ್ನು ಅಭಿವೃದ್ಧಿಪಡಿಸಬೇಕು ಎನ್ನುವುದರ ಬಗ್ಗೆ ವಿವರಗಳನ್ನು ಪಡೆಯತಕ್ಕಂಥ ಪ್ರಯತ್ನದಲ್ಲಿದ್ದೇವೆ. ಬೆಳ್ತಂಗಡಿ ಉದಾಹರಣೆ ಹೇಳಿದರು. ಸಾಮಾನ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬಹುಭಾಗ ತೊಂದರೆಗೆ ಈಡಾಗಿರುತ್ತದೆಂದು ತಿಳಿದಿರುತ್ತದೆ. ಬೇರೆ ಕಡೆಗಳಿಗಿಂತ ಈ ಕಡೆ ಬಹಳ ಅಗತ್ಯತೆ ಇರುವುದನ್ನು ವಿವರಗಳೊಂದಿಗೆ ತೋರಿಸಿರುತ್ತಾರೆ. ಮಂಗಳೂರಿಗೆ ಬರತಕ್ಕಂಥ ನ್ಯಾಷನಲ್

ಹೈವೆ ನಂ. ೪೮ರಲ್ಲಿ ಬೈಪಾಸ್ ರೋಡ್ ಮಾಡಬೇಕೆಂದು ವಿವರಣೆ ಕೊಟ್ಟಿರುತ್ತಾರೆ. ಆದರ ಬಗ್ಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಶ್ರೀ ಕೊಡಗಿಯವರು ವಾಹನ ಸಂಚಾರಕ್ಕೆ ಇರತಕ್ಕಂಥ ತೊಂದರೆಗಳನ್ನು ಹೇಳಿದರು. ಎಲ್ಲೆಲ್ಲಿಯೂ ಈ ರೀತಿ ವಾಹನಗಳಿಗೆ ಸಂಚಾರಕ್ಕೆ ತೊಂದರೆಯಾಗಿರುತ್ತದೆಂದು ಹೇಳುವ ಮಾತು ಸರಿಯಾದುದಲ್ಲ. ನಾನು ಒಂದೆರಡು ರಸ್ತೆಗಳನ್ನು ವಾಹನ ಸಂಚಾರಕ್ಕೆ ಬಿಡುಗಡೆ ಮಾಡತಕ್ಕಂಥ ಸಂದರ್ಭದಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತೇವೆ ಎನ್ನುವುದರ ಬಗ್ಗೆ ತಿಳಿಸಿರುತ್ತೇನೆ. ನನಗೆ ಬಂದಿರುವ ವರದಿಯ ಪ್ರಕಾರವಾಗಿ ಕೊನೆ ಪಕ್ಷ ಟೆಂಪರರಿ ಕಾರ್ಯಕ್ರಮಗಳನ್ನಾದರೂ ಹಾಕಿಕೊಳ್ಳಿ ಎಂದು ಹೇಳಿರುತ್ತಾರೆ. ಮಾನ್ಯ ಸದಸ್ಯರು ವಿವರಗಳನ್ನು ಕೊಟ್ಟರೆ ಅದನ್ನು ಇಲಾಖೆಗೆ ತಿಳಿಸಿ ತಕ್ಷಣ ವಾಹನ ಸಂಚಾರಕ್ಕೆ ಅನುಕೂಲವನ್ನು ಮಾಡಿಕೊಡುವಂಥ ಏರ್ಪಾಡನ್ನು ಮಾಡುತ್ತೇನೆಂದು ಹೇಳುತ್ತೇನೆ,

ಇನ್ನು ಪರಿಹಾರ ಕಾರ್ಯಕ್ರಮಗಳ ಬಗ್ಗೆ ಹೇಳುವುದಾದರೆ. ದಕ್ಷಿಣ ಕನ್ನಡ ಜಿಲ್ಲೆ ಪರಿಹಾರ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಅನೇಕ ಮಾನ್ಯ ಸದಸ್ಯರು ಹೇಳಿರುತ್ತಾರೆ. ಈ ಪರಿಹಾರ ಕಾರ್ಯಕ್ರಮಕ್ಕಾಗಿ ಇಟ್ಟಿರುವ ೫೬ ಲಕ್ಷ ರೂಪಾಯಿಗಳಲ್ಲಿ ೩೧ ಲಕ್ಷ ರೂಪಾಯಿಗಳಷ್ಟು ದಕ್ಷಿಣ ಕನ್ನಡ ಜಿಲ್ಲೆಯೊಂದಕ್ಕೇನೇ ಕೊಟ್ಟಿರುತ್ತೇವೆ. ಕಾರವಾರ ಜಿಲ್ಲೆಯಲ್ಲಿ ಅನೇಕ ಭಾಗಗಳಲ್ಲಿಯೂ ಕೂಡ ಇದೇ ರೀತಿಯಾದ ತೊಂದರೆಗಳು ಉಂಟಾಗಿರುತ್ತವೆ. ಶಿವಮೊಗ್ಗ ಜಿಲ್ಲೆಯೂ ಕೂಡ ಈ ರೀತಿಯಾದ ತೊಂದರೆಗೆ ಒಳಗಾಗಿರುತ್ತದೆ ಚಿಕ್ಕಮಗಳೂರು ಜಿಲ್ಲೆ ಮತ್ತು ಕೊಡಗುಜಿಲ್ಲೆಯ ಬಹುಭಾಗದ ವರದಿ ನಮ್ಮಲ್ಲಿ ಬಂದಿಲ್ಲ. ಈಗ ನಮಗೆ ಕೊಟ್ಟಿರತಕ್ಕಂಥ ೫೬ ಲಕ್ಷ ರೂಪಾಯಿಗಳು ಏನೇನು ಸಾಕಾಗುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಮಾನ್ಯ ಮಿತ್ರರು ಪರಿಹಾರ ಕಾರ್ಯಗಳಿಗಾಗಿ ಎಷ್ಟೆಷ್ಟು ಹಣ ಬೇಕಾಗುತ್ತದೆ ಎನ್ನುವುದರ ಬಗ್ಗೆ ಅಂಕಿ ಅಂಶಗಳ ಸಮೇತ ವಿವರಗಳನ್ನು ಕೊಟ್ಟರೆ ಆದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳಲು ಪ್ರಯತ್ನ ಪಡುತ್ತೇನೆಂದು ಹೇಳುತ್ತೇನೆ.

ಮಾನ್ಯ ಮೊಹಿಯುದ್ದೀನ್‌ರವರು ಪ್ರಸ್ತಾಪ ಮಾಡುತ್ತಾ ಈ ರೀತಿ ಟೆಂಪರರಿಯಾಗಿ ಮಾಡತಕ್ಕಂಥಾದ್ದರ ಬದಲಾಗಿ ಖಾಯಂ ಆಗಿ ಪರಿಹಾರ ಕಾರ್ಯಗಳು ಆಗಬೇಕೆಂದು ಹೇಳಿದರು, ಆದರ ಬಗ್ಗೆ ಏನೇನೂ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆದರ ಬಗ್ಗೆ ಎಸ್ಟಿಮೇಟ್ ಪ್ರಿಪೇರ್ ಮಾಡುತ್ತಿದ್ದಾರೆ. ಉದಾಹರಣೆಗೆ ನ್ಯಾಷನಲ್ ಹೈವೇ ಇದಕ್ಕೆ ಗೌರ್ನಮೆಂಟ್ ಆಫ್ ಇಂಡಿಯಾದ್ದು ಹಣ ಬರುವುದು ಇರುತ್ತದೆ. ಮೇಜರ್ ಡಿಪ್ಟಿಕ್ಟ್‌ಗೆ ಎಷ್ಟು ಹೈವೇ ಆಗಬೇಕಾಗಿರುತ್ತದೆ. ಇದಕ್ಕೆ ಎಷ್ಟು ಹಣ ಖರ್ಚು ಮಾಡಬೇಕಾಗಿರುತ್ತದೆ. ಅದನ್ನು ಮಾಡುತ್ತೇನೆ. ೩೧ ಲಕ್ಷ ರೂಪಾಯಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಯೊಂದಕ್ಕೆ ಖರ್ಚು ಮಾಡುತ್ತಿರುವುದರಿಂದ ಉಳಿದ ಜಿಲ್ಲೆಗಳ ಕಡೆಗೂ ಹೆಚ್ಚಿನ ಗಮನವನ್ನು ಕೊಡಬೇಕಾಗಿರುತ್ತದೆಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

MATTER UNDER RULE 312

(i) re : Reduction in seats for M.A. Economics of Bangalore University

† ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ (ವರತೂರು).—ಸನ್ಮಾನ್ಯ ಅಧ್ಯಕ್ಷರೇ ನಾನು ೩೧೨ ನೆಯ ನಿಯಮದ ಪ್ರಕಾರ ಬೆಂಗಳೂರು ವಿಶ್ವವಿದ್ಯಾನಿಲಯದ ಎಂ. ಎ. ಎಕನಾಮಿಕ್ಸ್‌ನಲ್ಲಿ ಸೀಟ್‌ಗಳನ್ನು ಕಡಿಮೆ ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಕೆಲವು ಅಂಕಿ ಅಂಶಗಳನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

ಸ್ವಾಮಿ, ಈ ಕೋರ್ಸಿನಲ್ಲಿ ಕಳೆದ ವರ್ಷಗಳು ಇದ್ದ ಸೀಟುಗಳು ಒಟ್ಟು ಸಂಖ್ಯೆ ಈ ಪ್ರಕಾರ ಇದೆ. ಕಾಲೇಜ್ ೧೯೭೦ ರಲ್ಲಿ ೫೦ ಸೀಟುಗಳು ೧೯೭೧ರಲ್ಲಿ ೮೫ ಸೀಟ್‌ಗಳು; ೧೯೭೨ರಲ್ಲಿ ೧೫೦ ಸೀಟ್‌ಗಳು. ೧೯೭೩ರಲ್ಲಿ ೧೮೦ ಸೀಟ್‌ಗಳು ೧೯೭೪ರಲ್ಲಿ ೨೧೮ ಸೀಟ್‌ಗಳು ಇದ್ದುವು. ೧೯೭೪ರಲ್ಲಿ ಸಂಜೆ ಕಾಲೇಜ್‌ನಲ್ಲಿ